# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 845 |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.03.2025 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು. |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | 2023-24 ಮತ್ತು 2024-25 ಫೆಬ್ರವರಿ ಅಂತ್ಯದವರೆಗೆ ರಾಜ್ಯದಲ್ಲಿ ನಡೆದಿರುವ ಕೊಲೆ, ಪೋಕ್ಸೋ, ಅತ್ಯಾಚಾರ, ಹಲ್ಲೆ, ಎನ್‌ಡಿಪಿಎಸ್ (ಡ್ರಗ್ಸ್), ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಸೈಬರ್ ಅಪರಾಧಗಳು, ವಿವಿಧ ರೀತಿಯ ವಂಚನೆಗಳು, ರಾಬರಿಗಳು, ಡಕಾಯಿತಿ, ದೇಶದ್ರೋಹದ ಪ್ರಕರಣಗಳು, ದೇಶದ್ರೋಹದ ಘೋಷಣೆ ಪ್ರಕರಣಗಳು, ಧರ್ಮಾಧಾರಿತ ಪ್ರಕರಣಗಳು, ಬಾಂಬ್ ಸ್ಫೋಟ ಹಾಗೂ ಇತ್ಯಾದಿ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಪೊಲೀಸ್ ಠಾಣೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ:- (see table below) |
| ಆ | ಅಪರಾಧ ತಡೆಗೆ ಪೊಲೀಸರಿಂದ ಒತ್ತು ನೀಡುವ ಕೆಲಸ ಆಗುತ್ತಿದೆಯೇ; ಹೆಚ್ಚಿನ ಬೀಟ್ ವ್ಯವಸ್ಥೆ ಜಾರಿಯಾಗಿದೆಯೇ; ಅಪರಾಧಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಆಗುತ್ತಿದೆಯೇ; ಅಪರಾಧ ಪ್ರಕರಣಗಳು ಯತೇಚ್ಛವಾಗಿ ನಡೆಯುತ್ತಿರುವುದರಿಂದ ಜನಸಾಮಾನ್ಯರಿಗೆ ರಕ್ಷಣೆಯೇ ಇಲ್ಲವೇ ಎಂಬ ಅನುಮಾನ ವ್ಯಕ್ತವಾಗುವುದಿಲ್ಲವೇ; ಸಮಾಜಘಾತುಕ ಶಕ್ತಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | • ಅಪರಾಧ ತಡೆಗೆ ಪೊಲೀಸರಿಂದ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಮತ್ತು ತಾಂತ್ರಿಕ ನೆರವುಗಳನ್ನು ಪಡೆದು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.<br>• ರಾಜ್ಯಾದ್ಯಾಂತ ಈ ಬೀಟ್ ಸಿಸ್ಟಮ್ (E-beat System) ಅನ್ನು ಅಳವಡಿಸಲಾಗಿದೆ.<br>• ಅಪರಾಧ ಪ್ರಕರಣಗಳು ಜರುಗಿದಾಗ ಕಾನೂನು ಅಗತ್ಯ ಕ್ರಮಗಳನ್ನು ತೆಗೆದುಕೊಂಡು ತ್ವರಿತವಾಗಿ ಆರೋಪಿಗಳನ್ನು ಬಂಧಿಸಿ ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗುತ್ತಿದೆ.<br>• ಅಪರಾಧ ಕೃತ್ಯಗಳು ಎಸಗಿದಾಗ ನೊಂದವರು ಧೈರ್ಯವಾಗಿ ಪೊಲೀಸ್ ಠಾಣೆಗಳಿಗೆ ಬಂದು ದೂರುಗಳನ್ನು ದಾಖಲಿಸುತ್ತಿರುವುದರಿಂದ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿರುವುದು ಕಂಡುಬಂದಿರುತ್ತದೆ.<br>• ಸಮಾಜ ಘಾತುಕ ಶಕ್ತಿಗಳ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸಿ ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿರುತ್ತದೆ. |

| ವರ್ಷ | 2023 | 2024 | 2025 (Feb) |
|---|---|---|---|
| ಕೊಲೆ | 1294 | 1207 | 175 |
| ಪೋಕ್ಸೋ | 3898 | 4019 | 594 |
| ಅತ್ಯಾಚಾರ | 601 | 736 | 124 |
| ಎನ್.ಡಿ.ಪಿ.ಎಸ್ (ಡ್ರಗ್ಸ್) | 6767 | 4184 | 726 |
| ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ | 6492 | 6326 | 799 |
| ಸೈಬರ್ ಅಪರಾಧಗಳು | 22224 | 22415 | 2251 |
| ವಂಚನೆಗಳು | 6927 | 6574 | 830 |
| ರಾಬರಿಗಳು | 1243 | 994 | 92 |
| ಡಕಾಯಿತಿ | 178 | 153 | 20 |
| ದೇಶದ್ರೋಹದ ಪ್ರಕರಣಗಳು | 0 | 4 | 0 |
| ದೇಶದ್ರೋಹದ ಘೋಷಣೆ ಪ್ರಕರಣಗಳು | 3 | 5 | 0 |
| ಧರ್ಮಾಧಾರಿತ ಪ್ರಕರಣಗಳು | 119 | 144 | 115 |
| ಬಾಂಬ್ ಸ್ಫೋಟ | 4 | 5 | 2 |

**ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳು:-**

ರಾಜ್ಯದಲ್ಲಿ ಒಟ್ಟು 1072 ಪೋಲೀಸ್ ಠಾಣೆಗಳಲ್ಲಿ ವರದಿಯಾಗಿರುವ ಪ್ರಮುಖ ಅಪರಾಧಗಳ ಸಂಖ್ಯೆಗಳನ್ನು ವಿಶ್ಲೇಷಣೆ ಮಾಡುವಾಗ ಹಿಂದಿನ ವರ್ಷಗಳಿಗೆ ಹೋಲಿಸಿದಲ್ಲಿ ಈ ವರ್ಷ ಅಪರಾಧ ಸಂಖ್ಯೆ ಏರಿಕೆಯಾಗಿರುವುದಿಲ್ಲ ಎಂಬುದು ಕಂಡುಬರುತ್ತದೆ. ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಹಲವಾರು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- ರಾಜ್ಯಾದ್ಯಂತ ಈ ಬೀಟ್ ಸಿಸ್ಟಮ್ (E-beat System) ಅನ್ನು ಅಳವಡಿಸಲಾಗಿದೆ.
- 30 ಹೆಚ್ಚುವರಿ ಪೋಲೀಸ್ ಅಧೀಕ್ಷಕರು, ಅಪರಾಧ (Addl.SP, Crime-2) ಹುದ್ದೆಗಳನ್ನು ಸೃಜಿಸಲಾಗಿದೆ.
- ತನಿಖಾ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ 206 Scene of Crime (SOCO) ಅಧಿಕಾರಿಗಳನ್ನು ನೇಮಿಸಿ ಎಲ್ಲಾ ಘಟಕಗಳಿಗೆ ಈಗಾಗಲೇ ನಿಯೋಜಿಸಲಾಗಿದೆ. ಮುಂದಿನ ದಿವಸಗಳಲ್ಲಿ 500 ಸೋಕೋ ಅಧಿಕಾರಿಗಳನ್ನು ನೇಮಕ ಮಾಡಿ ಅಪರಾಧ ಸ್ಥಳಗಳಲ್ಲಿ ಕೈಗೊಳ್ಳುವ ತನಿಖೆಗಾಗಿ ಸಾಕ್ಷಿಗಳನ್ನು ಸಂಗ್ರಹ ಮಾಡಿ ನ್ಯಾಯಾಲಯದಲ್ಲಿ ವಸ್ತು ವಾಸ್ತವ ಸಂಗತಿಗಳಿಂದ ಅಪರಾಧ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಲು ಸಹಕಾರಿಯಾಗಲಿದೆ.
- ರಾತ್ರಿ ಗಸ್ತಿನಲ್ಲಿ ಅಪರಿಚಿತ ವ್ಯಕ್ತಿಗಳ (Suspected Persons) ಬೆರಳು ಮುದ್ರೆಗಳನ್ನು ಸಂಗ್ರಹಿಸಲು ಒಟ್ಟು 2500 Single Finger scanner ಗಳನ್ನು ನೀಡಲಾಗಿದೆ. ಕಳೆದ 3 ವರ್ಷಗಳಲ್ಲಿ 12,032 ಅಪರಿಚಿತ ವ್ಯಕ್ತಿಗಳ (Suspected Persons) ಬೆರಳು ಮುದ್ರೆಗಳನ್ನು ಸಂಗ್ರಹಿಸಲಾಗಿದೆ. ಇದರಿಂದ ಅವರು ಅಪರಾಧಗಳಲ್ಲಿ ಭಾಗಿಯಾಗಿದ್ದಲ್ಲಿ ಸ್ಥಳದಲ್ಲಿಯೇ ಮಾಹಿತಿ ಪಡೆಯಲು ಸಹಕಾರಿಯಾಗಿದೆ ಮತ್ತು ಅಪರಾಧವನ್ನು ತಡೆಗಟ್ಟಲು ಅದರಲ್ಲಿಯೂ ರಾತ್ರಿ ಗಸ್ತಿನಲ್ಲಿರುವ ಪೋಲೀಸ್ ಅಧಿಕಾರಿಗಳಿಗೆ ಅತ್ಯಂತ ಉಪಯುಕ್ತವಾದ ಸಾಧನವಾಗಿದೆ.
- ರಾಜ್ಯದಲ್ಲಿ ಮಹಿಳೆಯರ, ಮಕ್ಕಳ ಮತ್ತು ಹಿರಿಯ ನಾಗರೀಕರ ಸುರಕ್ಷತೆ ಸಂಬಂಧವಾಗಿ, ಮಹಿಳಾ ಸಹಾಯವಾಣಿ (1091) ಮಕ್ಕಳ ಸಹಾಯವಾಣಿ (1098) ಮತ್ತು ಹಿರಿಯ ನಾಗರೀಕರ ಸಹಾಯವಾಣಿ (1090) ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿವೆ.
- ಸಾರ್ವಜನಿಕರ ತುರ್ತು ಪರಿಸ್ಥಿತಿಗಳನ್ನು ಪರಿಹರಿಸಲು DIAL 112 ERSS (Emergency Response Support System) ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಇದರಿಂದ ವರ್ಷಕ್ಕೆ ಸರಾಸರಿ 45 ಲಕ್ಷ ಕರೆಗಳನ್ನು ಸಾರ್ವಜನಿಕರಿಂದ ಸ್ವೀಕರಿಸಿ ಕ್ರಮ ವಹಿಸಲಾಗಿದೆ. ಈ ವ್ಯವಸ್ಥೆಯ ಅಡಿಯಲ್ಲಿ ಒಟ್ಟು 704 ವಾಹನಗಳು ಕಾರ್ಯ ನಿರ್ವಹಿಸುತ್ತಿದ್ದು, ಕೂಡಲೇ ಕರೆಗಳಿಗೆ ಸ್ಪಂದಿಸಿ ಸ್ಥಳಕ್ಕೆ ಭೇಟಿ ನೀಡಲಾಗುತ್ತಿದೆ. ಈ ವ್ಯವಸ್ಥೆಯಿಂದ ಅತ್ಯಂತ ಕಡಿಮೆ ಅವಧಿಯಲ್ಲಿ ನಗರದಲ್ಲಿ ಕೇವಲ 5 ನಿಮಿಷ 56 ಸೆಕೆಂಡ್ ಮತ್ತು ಗ್ರಾಮೀಣ ಭಾಗದಲ್ಲಿ 18 ನಿಮಿಷಗಳಲ್ಲಿ ಕರೆ ಮಾಡಿದ ಸ್ಥಳಗಳಿಗೆ ಭೇಟಿ ನೀಡಲಾಗುತ್ತಿದೆ.
- ರಾಜ್ಯದಲ್ಲಿ ಎಲ್ಲಾ ಪ್ರಮುಖ ನಗರಗಳು ಮತ್ತು ಉಪನಗರಗಳಲ್ಲಿ ಸಾರ್ವಜನಿಕ ಸುರಕ್ಷತೆ ಮತ್ತು ಅಪರಾಧಗಳನ್ನು ನಿಯಂತ್ರಿಸುವ ಸಂಬಂಧವಾಗಿ ಸಿಸಿಟಿವಿ ಕ್ಯಾಮರಾಗಳನ್ನು (CCTV camera) ಅಳವಡಿಸಲಾಗಿದೆ.

| | | |
|---|---|---|
| | | • ಸರ್ಕಾರದ ವತಿಯಿಂದ – 2,99,588 ಸಿಎಸ್‌ಆರ್ ಫಂಡ್ (CSR fund) ವತಿಯಿಂದ – 2,92,821 Safe city project ಅಡಿಯಲ್ಲಿ. – 7,500 ಸಿಸಿಟಿವಿ, ಒಟ್ಟು 5,99,909 ಸಿಸಿಟಿವಿ ಕ್ಯಾಮರಗಳನ್ನು ಅಳವಡಿಸಲಾಗಿದೆ. Karnataka Public Safety (Measures) Enforcement Act 2017 ರಡಿಯಲ್ಲಿ ಎಲ್ಲಾ ವಾಣಿಜ್ಯ ಸಂಸ್ಥೆ, ಕೈಗಾರಿಕೆ ಸಂಸ್ಥೆ, ಧಾರ್ಮಿಕ ಸ್ಥಳಗಳು, ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಕ್ರೀಡಾ ಸಂಕೀರ್ಣಗಳಲ್ಲಿ, ಈ ಅಧಿನಿಯಮದಂತೆ ಸಿಸಿಟಿವಿ ಕ್ಯಾಮರಾ ಅಳವಡಿಸಿರುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗಿದೆ.<br>• ರಾಜ್ಯದಲ್ಲಿ ಅಪರಾಧ ತಡೆಗಟ್ಟಲು ಮತ್ತು ಕಾನೂನು ಸುವ್ಯವಸ್ಥೆ ನಿಯಂತ್ರಿಸಲು ಅಸಾಮಿ ಚರಿತ್ರೆಹಾಳೆ (History sheet), ಅಸಾಮಿ ರೌಡಿ ಪಟ್ಟಿ (MOB), ರೂಡಿಗತ ಅಪರಾಧಿಗಳು (Habitual offenders) ಆಸಾಮಿ ಪೂರ್ವಸಜೆ (Prior Impressments) ಕಮ್ಯುನಲ್ ಗೂಂಡಾಗಳ (Communal Gundas) ವಿರುದ್ಧ BNSS/ CRPC u/s 107, 108, 110 ಅಡಿಯಲ್ಲಿ ಪ್ರಕರಣ ನೊಂದಾಯಿಸಲಾಗುತ್ತಿದ್ದು, ಪ್ರತಿ ವರ್ಷ ಸುಮಾರು 50,000 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಅವರಿಂದ ಜಾಮೀನು ಮುಚ್ಚಳಿಕೆಯನ್ನು ಪಡೆದು ಸದರಿಯವರುಗಳ ಮೇಲೆ ನಿಗಾ ಇಡಲಾಗಿದೆ.<br>• 1,58,146 ಎಮ್‌ಓಬಿ (Modus Operandi) ಆಸಾಮಿಗಳ ವಿರುದ್ಧ ದಾಖಲಾತಿಗಳನ್ನು ನಿರ್ವಹಣೆ ಮಾಡಿ ಅವರು ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ನಿಗಾವಹಿಸಲಾಗುತ್ತಿದೆ.<br>• ಕರ್ನಾಟಕ ರಾಜ್ಯದಲ್ಲಿ ಒಟ್ಟು 250 ಹೆದ್ದಾರಿ ಗಸ್ತು ವಾಹನ (Highway Patrolling Vehicle) ಕರ್ತವ್ಯ ನಿರ್ವಹಿಸುತ್ತಿದ್ದು, ಹೆದ್ದಾರಿಗಳಲ್ಲಿ ಸಾರ್ವಜನಿಕ ಸುರಕ್ಷತೆಗೆ ಶ್ರಮಿಸಲಾಗುತ್ತಿದೆ. |
| ಇ | ಸಾಲು ಸಾಲು ಅಪರಾಧ ಪ್ರಕರಣಗಳು ವರದಿಯಾಗುತ್ತಿದ್ದು, ಸಮಾಜ ಘಾತುಕ ಶಕ್ತಿಗಳು ಎಲ್ಲೆ ಮೀರಿ ಮೆರೆಯುತ್ತಿದ್ದು, ಧರ್ಮಾಧಾರಿತ ಪ್ರಕರಣಗಳು ಯತೇಚ್ಛವಾಗಿ ಬೆಳಕಿಗೆ ಬರುತ್ತಿದ್ದು ಸಾರ್ವಜನಿಕರಲ್ಲಿ ಒಂದು ರೀತಿಯ ಆತಂಕದ ವಾತಾವರಣ ಸೃಷ್ಟಿಯಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾದಂತಾಗಿರುವುದಿಲ್ಲವೇ; ಲಾ ಅಂಡ್ ಆರ್ಡರ್ ಪೂರ್ಣ ಪ್ರಮಾಣದಲ್ಲಿ ಕೈತಪ್ಪಿ ಹೋದಂತಾಗುವುದಿಲ್ಲವೇ; (ಸಂಪೂರ್ಣ ಮಾಹಿತಿ ನೀಡುವುದು) | **ಕಾನೂನು ಸುವ್ಯವಸ್ಥೆ ಮೇಲೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-**<br>• ಸಮಾಜ ಘಾತಕ ಶಕ್ತಿಗಳು/ಮತೀಯ ಗೂಂಡಾ ರವರ ಮೇಲೆ ನಿಗಾವಹಿಸಲಾಗುತ್ತಿದೆ.<br>• ಪ್ರಮುಖ ಧಾರ್ಮೀಕ ಹಬ್ಬಗಳು, ಮೆರೆವಣಿಗೆಗಳು, ಬಂದೋಬಸ್ತು ಹಾಗೂ ಚುನಾವಣೆ ವೇಳೆ ಪೋಲೀಸ್ ಠಾಣೆಗೆ ಕರೆಯಿಸಿ ಮುಂಜಾಗೃತಾ ಕ್ರಮ ಕೈಗೊಂಡು ಸಮಾಜದ ಶಾಂತಿ ಸುವ್ಯವಸ್ಥೆಗೆ ಧಕ್ಕೆ ಬರದಂತೆ ಕಟ್ಟು ನಿಟ್ಟಾಗಿ ಎಚ್ಚರಿಕೆಯನ್ನು ನೀಡಲಾಗುತ್ತಿದೆ.<br>• ಸಾಮಾಜಿಕ ಜಾಲತಾಣ ಘಟಕದ ಮೂಲಕ ಅಧಿಕಾರಿ, ಸಿಬ್ಬಂದಿಗಳ ಮೂಲಕ 24 ಗಂಟೆ ನಿಗಾವಹಿಸಲಾಗುತ್ತಿದೆ.<br>• ಪ್ರಮುಖ ಧಾರ್ಮೀಕ ಕಾರ್ಯಕ್ರಮಗಳ ಸಮಯದಲ್ಲಿ ಮುಂಚಿತವಾಗಿ ಎಲ್ಲಾ ಸಮುದಾಯದ ಮುಖಂಡರನ್ನು ಕರೆಯಿಸಿ ಶಾಂತತಾ ಸಭೆ ನಡೆಸಿ ಸೂಕ್ತ ನಿರ್ದೇಶನ ನೀಡಲಾಗುತ್ತದೆ.<br>• ಠಾಣಾ ಹದ್ದಿಯಲ್ಲಿ ಹೆಚ್ಚಿನ ಪೆಟ್ರೋಲಿಂಗ್ ಮಾಡುತ್ತಾ ನಿಗಾ |

ವಹಿಸಲಾಗುತ್ತಿದೆ. ಫಿಕ್ಸ್ ಪಾಯಿಂಟ್, ಸೆಕ್ಟರ್ ಕರ್ತವ್ಯ, ಶಕ್ತಿ ಮತ್ತು ಹೊಯ್ಸಳ ಕರ್ತವ್ಯಗಳನ್ನು ಶಿಸ್ತು ಬದ್ಧವಾಗಿ ನಿರ್ವಹಿಸುತ್ತಿದ್ದು ಅಧಿಕಾರಿಗಳಿಗೆ ಉಸ್ತುವಾರಿ ಜವಾಬ್ದಾರಿ ನೀಡಲಾಗಿದೆ.

- ಸಮಾಜ ಘಾತುಕ ಶಕ್ತಿಗಳ ವಿರುದ್ಧ ಹಬ್ಬದ ಸಂದರ್ಭದ ಮೆರವಣಿಗೆ, ಬಂದೋಬಸ್ತ ವೇಳೆ ಸಿಸಿ ಕ್ಯಾಮೆರಾ, ಡ್ರೋನ್ ಮೂಲಕ ನಿಗಾವಹಿಸುತ್ತಾ ಹಾಗೂ ಹೆಚ್ಚಿನ ಸಿಬ್ಬಂದಿ ನಿಯೋಜಿಸಿ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಈ

ರಾಜ್ಯದಲ್ಲಿ ವಿವಿಧ ಸಂಘಟನೆಗಳ ವಿರುದ್ಧ ದಾಖಲಾದ ಪ್ರಕರಣಗಳೆಷ್ಟು; ಸಂಘಟನೆಗಳ ವಿರುದ್ಧ ಇಲ್ಲಿಯವರೆಗೆ ದಾಖಲಾದ ಪ್ರಕರಣಗಳನ್ನು 2023-24 ಮತ್ತು 2024-25ನೇ ಸಾಲಿನಲ್ಲಿ ಕೈಬಿಡುವುದು/ ಹಿಂಪಡೆಯಲಾಗಿದೆಯೇ; ಕೈಬಿಡುವ/ ಹಿಂಪಡೆಯುವ ವಿಷಯ ಸರ್ಕಾರದ ಮುಂದಿದೆಯೇ; ಒಂದು ವೇಳೆ ಕೈಬಿಟ್ಟು/ ಹಿಂಪಡೆದಿದ್ದರೆ ಎಷ್ಟು ಪ್ರಕರಣಗಳು ಮತ್ತು ಯಾವ ಯಾವ ಸಂಘಟನೆಗಳ ಪ್ರಕರಣಗಳನ್ನು ಕೈಬಿಡಲಾಗಿದೆ/ ಹಿಂಪಡೆಯಲಾಗಿದೆ? (ಮಾಹಿತಿ ನೀಡುವುದು)

ರಾಜ್ಯದಲ್ಲಿ ವಿವಿಧ ಸಂಘಟನೆಗಳ ವಿರುದ್ಧ ದಾಖಲಾದ ಪ್ರಕರಣಗಳ ವರ್ಷವಾರು ಮಾಹಿತಿ ಕೆಳಗಿನಂತಿದೆ.

| ಕ್ರಸ | ವರ್ಷ | ವಿವಿಧ ಸಂಘಟನೆಗಳ ವಿರುದ್ಧ ದಾಖಲಾದ ಪ್ರಕರಣಗಳ ಸಂಖ್ಯೆ |
|---|---|---|
| 1 | 2023 | 17 |
| 2 | 2024 | 8 |
| 4 | 2025 | 2 |
| | ಒಟ್ಟು | 27 |

ಪ್ರಕರಣಗಳನ್ನು ಅಭಿಯೋಜನೆಯಿಂದ ಹಿಂಪಡೆಯಲು ಸ್ವೀಕೃತವಾಗುವ ಮನವಿಗಳಿಗೆ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ಮತ್ತು ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಅಭಿಪ್ರಾಯ ಪಡೆಯಲಾಗುತ್ತದೆ. ನಂತರ, ಕಾನೂನು ಇಲಾಖೆಯಿಂದಲೂ ಅಭಿಪ್ರಾಯ ಪಡೆದು, ಸರ್ಕಾರವು ಕ್ರಿಮಿನಲ್ ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯುವ ಕುರಿತು ಪರಿಶೀಲಿಸಲು ರಚಿಸಿರುವ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಪರಿಶೀಲನೆಗೆ ಮಂಡಿಸಲಾಗುತ್ತದೆ. ಸಚಿವ ಸಂಪುಟದ ಉಪ ಸಮಿತಿಯು ಸಿಆರ್‌ಪಿಸಿ ಕಲಂ 321 ಅಡಿಯಲ್ಲಿ ಅಭಿಯೋಜನೆಯಿಂದ ಹಿಂಪಡೆಯಲು ಸೂಕ್ತವೆಂದು ಶಿಫಾರಸ್ಸು ಮಾಡಿದ ಪ್ರಕರಣಗಳನ್ನು ಸಚಿವ ಸಂಪುಟದ ನಿರ್ಣಯಕ್ಕಾಗಿ ಮಂಡಿಸಲಾಗುತ್ತದೆ. ಸಚಿವ ಸಂಪುಟದಲ್ಲಿ ಅಭಿಯೋಜನೆಯಿಂದ ಹಿಂಪಡೆಯಲು ಸೂಕ್ತವೆಂದು ಅನುಮೋದನೆ ನೀಡಿದ ಪ್ರಕರಣಗಳನ್ನು ಮಾತ್ರ ಅಭಿಯೋಜನೆಯಿಂದ ಹಿಂಪಡೆಯಲು ಮಾನ್ಯ ನ್ಯಾಯಾಲಯಗಳಲ್ಲಿ ಅಗತ್ಯ ಅರ್ಜಿ ಸಲ್ಲಿಸಲು ಸರ್ಕಾರದ ಅನುಮೋದನೆ ನೀಡಿ ಆದೇಶ ಹೊರಡಿಸಲಾಗುತ್ತದೆ.

ಈ ರೀತಿ ಹೊರಡಿಸಲಾಗುವ ಆದೇಶಗಳು ಮಾನ್ಯ ಸರ್ವೋಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:699/2016 ಅಶ್ವಿನಿ ಕುಮಾರ್ ಉಪಾಧ್ಯಾಯ v/s ಕೇಂದ್ರ ಸರ್ಕಾರ ಹಾಗೂ ಇತರರು ಅರ್ಜಿಯಲ್ಲಿ ನೀಡಿರುವ ಆದೇಶ ದಿನಾಂಕ:10.08.2021ರಲ್ಲಿ ಹಾಗೂ ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:12755/2020 ರ IA 1/2022ರ ಮಧ್ಯಂತರ ಅರ್ಜಿಯಲ್ಲಿನ ದಿನಾಂಕ:13.07.2022ರ ಆದೇಶಗಳಲ್ಲಿ ಜನಪ್ರತಿನಿಧಿಗಳ ವಿರುದ್ಧದ ಪ್ರಕರಣಗಳನ್ನು ಅಭಿಯೋಜನೆಯಿಂದ ಹಿಂಪಡೆಯಲು ಮಾನ್ಯ ಉಚ್ಛ ನ್ಯಾಯಾಲಯವು ನೀಡುವ ನಿರ್ದೇಶನಗಳನ್ನು ಪಾಲಿಸುವ ಷರತ್ತಿಗೊಳಪಟ್ಟಿರುತ್ತದೆ.

ರಾಜ್ಯದಲ್ಲಿ ವಿವಧ ಸಂಘಟನೆಗಳ ವಿರುದ್ಧ ದಾಖಲಾದ ಪ್ರಕರಣಗಳ ಮಾಹಿತಿಯನ್ನು ಸಂಘಟನೆಗಳವಾರು ವಿಂಗಡಣೆ ಮಾಡಿ ಸರ್ಕಾರದ ಹಂತದಲ್ಲಿ ಕ್ರಮ ವಹಿಸಲಾಗುತ್ತಿಲ್ಲ. ರಾಜ್ಯದ ನೆಲ, ಜಲದ ರಕ್ಷಣೆಗಾಗಿ ಹಾಗೂ ರೈತಪರ

| | | |
|---|---|---|
| | | ಚಳುವಳಿಗಳಲ್ಲಿ ಭಾಗವಹಿಸಿದ ರಾಜ್ಯದ ರೈತರ ಮೇಲೆ ಹೂಡಿರುವ ಪ್ರಕರಣಗಳನ್ನು ಹಿಂಪಡೆಯುವ ಪ್ರಸ್ತಾವನೆಗಳು ನಿಯಮಾನುಸಾರ ಪರಿಶೀಲನೆಯಲ್ಲಿರುತ್ತವೆ. ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯುವ ಪ್ರಕ್ರಿಯೆಯಲ್ಲಿ ಸಕ್ಷಮ ನ್ಯಾಯಾಲಯವು ನೀಡುವ ಅಂತಿಮ ಆದೇಶ/ನಿರ್ದೇಶನಗಳನ್ನು ಪಾಲಿಸುವ ಷರತ್ತಿಗೊಳಪಟ್ಟಿರುತ್ತವೆ. |

ಸಂಖ್ಯೆ:ಹೆಚ್‌ಡಿ 17 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು